# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಂ ಎಲ್ ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | : | 2057 (2462) |
| ಉತ್ತರಿಸಬೇಕಾದ ದಿನಾಂಕ | : | 27.03.2026 |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಜಲ ಜೀವನ್ ಮಿಷನ್ ಹಾಗೂ ಹರ್ ಘರ್ ಜಲ್ ಯೋಜನೆಯ ಉದ್ದೇಶವೇನು; ಯೋಜನೆಯು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು; ಹಾಗೂ ಯಾವ ಕಾಲಮಿತಿಯೊಳಗೆ ಸದರಿ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು; (ಸಂಪೂರ್ಣವಾದ ಮಾಹಿತಿ ನೀಡುವುದು) | ಜಲ ಜೀವನ್ ಮಿಷನ್ ಯೋಜನೆಯು ಕೇಂದ್ರ ಸರ್ಕಾರದಿಂದ 15 ಆಗಸ್ಟ್ 2019 ರಂದು ಜಾರಿಗೆ ಬಂದಿದ್ದು, ಸದರಿ ಕಾರ್ಯಕ್ರಮದಡಿ 2024ರೊಳಗಾಗಿ ರಾಜ್ಯದ ಎಲ್ಲಾ ಗ್ರಾಮೀಣ ಮನೆಗಳಿಗೆ 55 LPCD ಯಂತೆ ಶುದ್ಧ ಕುಡಿಯುವ ನೀರನ್ನು ಕಾರ್ಯಾತ್ಮಕ ನಳ ಸಂಪರ್ಕ ಮೂಲಕ ಸಮುದಾಯದ ಸಹಭಾಗಿತ್ವದೊಂದಿಗೆ ಒದಗಿಸುವ ಉದ್ದೇಶ ಹೊಂದಲಾಗಿದೆ.<br>ಕೇಂದ್ರ ಸರ್ಕಾರದ 2025-26ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ಜಲ ಜೀವನ್ ಮಿಷನ್ ಯೋಜನೆಯನ್ನು 2028ರವರೆಗೆ ವಿಸ್ತರಿಸಲಾಗಿರುತ್ತದೆ.<br>ಹರ್ ಘರ್ ಜಲ್ ಎನ್ನುವುದು ಯೋಜನೆಯು ಪೂರ್ಣಗೊಂಡಿರುವುದನ್ನು ಘೋಷಿಸುವ ಪ್ರಕ್ರಿಯೆಯಾಗಿದ್ದು, ಅಕ್ಟೋಬರ್-2021 ರಂದು ಪ್ರಾರಂಭಿಸಲಾಗಿದೆ. ಸದರಿ ಕಾರ್ಯಕ್ರಮದಡಿ ಶೇ.100ರಷ್ಟು ನಳ ಸಂಪರ್ಕ ಹೊಂದಿರುವ ಗ್ರಾಮಗಳನ್ನು ಹರ್ ಘರ್ ಜಲ್ ಎಂದು ಗ್ರಾಮಮಟ್ಟದ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ (VWSC) ರವರಿಂದ ಘೋಷಿಸಲಾಗುತ್ತದೆ. |
| ಆ) | ಈ ಯೋಜನೆಗಾಗಿ ಪ್ರಾರಂಭದಿಂದ ಈವರೆಗೂ ಕೇಂದ್ರದಿಂದ ಹಾಗೂ ರಾಜ್ಯ | ಜಲ ಜೀವನ್ ಮಿಷನ್ ಯೋಜನೆ ಪ್ರಾರಂಭದಿಂದ ಈವರೆಗೂ ಕೇಂದ್ರದಿಂದ ಹಾಗೂ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | ಸರ್ಕಾರದಿಂದ ಬಿಡುಗಡೆಗೊಳಿಸಿರುವ ಅನುದಾನವೆಷ್ಟು; (ವರ್ಷವಾರು ಸಂಪೂರ್ಣವಾದ ಮಾಹಿತಿ ನೀಡುವುದು); | ರಾಜ್ಯ ಸರ್ಕಾರದಿಂದ ಬಿಡುಗಡೆಗೊಳಿಸಿರುವ ಅನುದಾನದ ವರ್ಷವಾರು ಮಾಹಿತಿ **ಅನುಬಂಧದಲ್ಲಿ** ಲಗತ್ತಿಸಿದೆ.<br>ಕೇಂದ್ರ ಸರ್ಕಾರದ ಅನುದಾನ ಬಿಡುಗಡೆಯನ್ನು ನಿರೀಕ್ಷಿಸಿ, ರಾಜ್ಯ ಸರ್ಕಾರವು 2019-20 ರಿಂದ 2025-26ರ ವರೆಗೆ ಒಟ್ಟು ರೂ.15,504.63 ಕೋಟಿಗಳನ್ನು ಮುಂಗಡವಾಗಿ ಬಿಡುಗಡೆ ಮಾಡಿದೆ. ಈ ಮುಂಗಡ ಅನುದಾನವನ್ನು ಮಾರ್ಗಸೂಚಿಯಲ್ಲಿನ ಅನುಪಾತದಂತೆ ಹೊಂದಾಣಿಕೆ ಮಾಡಲು ಕೇಂದ್ರ ಸರ್ಕಾರದ ಒಟ್ಟು ರೂ.7843.79 ಕೋಟಿಗಳ ಅನುದಾನದ ಅವಶ್ಯಕತೆ ಇರುತ್ತದೆ.<br>ಅನುದಾನ ಬಿಡುಗಡೆಗಾಗಿ 2025-26ನೇ ಸಾಲಿನಲ್ಲಿ ಕೇಂದ್ರ ಸರ್ಕಾರಕ್ಕೆ ಬರೆದ ಪತ್ರ ವ್ಯವಹಾರದ ವಿವರ ಈ ಕೆಳಕಂಡಂತಿದೆ.<br>• ಸನ್ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ ರವರ ಮೂಲಕ ದಿನಾಂಕ:15.10.2025 ಮತ್ತು 17.11.2025ಗಳಲ್ಲಿ ಪತ್ರ ಬರೆಯಲಾಗಿದೆ.<br>• ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಮೂಲಕ ದಿನಾಂಕ:31.07.2025 ಮತ್ತು ದಿನಾಂಕ: 29.11.2025 ಗಳಲ್ಲಿ ಪತ್ರ ಬರೆಯಲಾಗಿದೆ.<br>• ಸರ್ಕಾರದ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಮೂಲಕ ದಿನಾಂಕ: 02.08.2025, 10.10.2025 ಮತ್ತು 30.12.2025 ಗಳಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ ಕೇಂದ್ರ ಸರ್ಕಾರದಿಂದ 2025-26ನೇ ಸಾಲಿನಲ್ಲಿ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.<br><br>ಆದಾಗ್ಯೂ, ರಾಜ್ಯದಲ್ಲಿ ಜೆಜೆಎಂ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ, ರಾಜ್ಯ ಸರ್ಕಾರವು 2025-26 ರಲ್ಲಿ ರೂ.4,000.00 ಕೋಟಿಗಳ ಅನುದಾನವನ್ನು ಮುಂಗಡವಾಗಿ ಬಿಡುಗಡೆ ಮಾಡಿದೆ. |
| ಇ) | ಜಲ ಜೀವನ್ ಮಿಷನ್ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನ ಮಾಡಲು ಸರ್ಕಾರವು ಎದುರಿಸುತ್ತಿರುವ ಸಮಸ್ಯೆಗಳು ಯಾವುವು; ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ಜಲ ಜೀವನ್ ಮಿಷನ್ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನ ಮಾಡಲು ಗ್ರಾಕುನೀ&ನೈ ಇಲಾಖೆಯು ಎದುರಿಸುತ್ತಿರುವ ಸಮಸ್ಯೆಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.<br>1. ರಾಜ್ಯವು ದೇಶದ 2ನೇ ಅತೀ ಶುಷ್ಕ ಪ್ರದೇಶವಾಗಿದ್ದು, ಸುಸ್ಥಿರ ಜಲಮೂಲವನ್ನು ಗುರುತಿಸಲು ಹೆಚ್ಚಿನ ಸಮಯಾವಕಾಶ ತೆಗೆದುಕೊಳ್ಳಲಾಗಿದೆ.<br>2. ಬಹುಗ್ರಾಮ ಕುಡಿಯುವ ನೀರಿನ ಮೇಲೆ ಅವಲಂಬಿತವಾಗಿರುವ ಏಕ ಗ್ರಾಮ ಯೋಜನೆಗಳು ಭೌತಿಕವಾಗಿ ಪೂರ್ಣಗೊಂಡಿದ್ದರೂ ಬಹುಗ್ರಾಮ ಯೋಜನೆ ಪೂರ್ಣಗೊಳ್ಳುವರೆಗೆ ಹಾಲಿ ಲಭ್ಯವಿರುವ ಸ್ಥಳೀಯ ಮೂಲದಿಂದ ನೀರು ಸರಬರಾಜು ಮಾಡಲಾಗುತ್ತಿದೆ.<br>3. ಯೋಜನೆಯ ಗಾತ್ರಗಳಿಗೆ ಅನುಗುಣವಾಗಿ ಏಕ ಗ್ರಾಮ ಯೋಜನೆ (SVS)ಗಳಿಗೆ 6 ರಿಂದ 9 ತಿಂಗಳುಗಳಷ್ಟು ಹಾಗೂ . ಬಹುಗ್ರಾಮ ಯೋಜನೆ (MVS)ಗಳಿಗೆ 11 ರಿಂದ 36 ತಿಂಗಳುಗಳಷ್ಟು ಅನುಷ್ಠಾನ ಸಮಯ ನಿಗದಿ ಪಡಿಸಲಾಗಿರುತ್ತದೆ. ಸದರಿ ಯೋಜನೆಗಳ ಅನುಷ್ಠಾನದಲ್ಲಿ ನಿವೇಶನ/ಜಾಗಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಇಲಾಖೆ/ ಪ್ರಾಧಿಕಾರ ಅಥವಾ ಖಾಸಗಿ ವ್ಯಕ್ತಿಗಳಿಂದ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಖರೀದಿಸಬೇಕಾಗಿರುತ್ತದೆ. ಆದುದರಿಂದ ಹೆಚ್ಚಿನ ಸಮಯಾವಾಕಾಶ ತೆಗೆದುಕೊಳ್ಳಲಾಗುತ್ತಿದೆ.<br>4. (i) ಅರಣ್ಯ ಇಲಾಖೆಯ ಜಾಗಗಳನ್ನು (ಸಂರಕ್ಷಿತ ಅರಣ್ಯ ವಲಯ, ಸಾಮಾಜಿಕ ಅರಣ್ಯ ವಲಯ, ವನ್ಯ ಜೀವಿ ಅರಣ್ಯ ವಲಯ) ಪಡೆಯಲು ಅರಣ್ಯ ಸಂರಕ್ಷಣಾ ಕಾಯ್ದೆಯನ್ವಯ ಅನುಮತಿ ಪಡೆಯುವ ಪ್ರಕ್ರಿಯೆ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ.<br>(ii) ರೈಲ್ವೇ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಲೋಕೋಪಯೋಗಿ ಇಲಾಖೆ ಹಾಗೂ ಇತರೆ ಇಲಾಖೆಗಳ ಸ್ವತ್ತುಗಳ, ಬಳಕೆಗೆ ನಿರಾಕ್ಷೇಪಣಾ ಪತ್ರ ಪಡೆಯಬೇಕಿರುತ್ತದೆ.<br>(iii) ಜಾಕ್ ವೆಲ್ ನಿರ್ಮಾಣ ಸ್ಥಳಗಳ ತೀರುವಳಿಗೆ ಸಂಬಂಧಿಸಿದ ನಿಗಮ / ಇಲಾಖೆಗಳಿಂದ ಸಹಮತಿ ಪಡೆಯುವುದು.<br>(iv) ಖಾಸಗಿ ನಿವೇಶನಗಳನ್ನು ಗುತ್ತಿಗೆದಾರರು ಖರೀದಿಸಬೇಕಾಗಿರುವುದು ಹಾಗೂ ಸಂಬಂಧಿತ ಹಕ್ಕು ದಾಖಲೆ ಪಡೆಯಲು ವಿಳಂಬ.<br><br>ರಾಜ್ಯವು ಅತೀ ಶುಷ್ಕ ಪ್ರದೇಶವಾಗಿರುವುದರಿಂದ ಬಹುತೇಕವಾಗಿ ಅಂತರ್ಜಲವನ್ನು ಜಲಮೂಲವನ್ನಾಗಿ ಅವಲಂಬಿಸಿರುತ್ತದೆ. ಜಲ ಜೀವನ್ ಮಿಷನ್ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿರುವ ಬಹುಗ್ರಾಮ ಕುಡಿಯುವ ನೀರು ಯೋಜನೆಗೆ ಸುಸ್ಥಿರ ಜಲಮೂಲಗಳಾದ ಪ್ರಮುಖ ನದಿಗಳನ್ನು ಹಾಗೂ ಜಲಾಶಯಗಳನ್ನು ಜಲಮೂಲಗಳನ್ನಾಗಿ ಪರಿಗಣಿಸಲಾಗಿರುತ್ತದೆ.<br>ರಾಜ್ಯದಲ್ಲಿ ಏಕಗ್ರಾಮ ಹಾಗೂ ಬಹುಗ್ರಾಮ |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಯೋಜನೆಗಳನ್ನು ಏಕಕಾಲಕ್ಕೆ ಪ್ರಾರಂಭಿಸಲಾಗಿದ್ದು, ಬಹುಗ್ರಾಮ ಅವಲಂಬಿತ ಬಹುತೇಕ ಏಕಗ್ರಾಮ ಯೋಜನೆಗಳು ಭೌತಿಕವಾಗಿ ಮೊದಲು ಪೂರ್ಣಗೊಂಡಿದ್ದರೂ, ಗ್ರಾಮಗಳಲ್ಲಿ ಲಭ್ಯವಿರುವ ಕೊಳವೆ ಬಾವಿಗಳಿಂದ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಸದರಿ ಗ್ರಾಮಗಳಿಗೆ ಸಂಬಂಧಿಸಿದ ಬಹುಗ್ರಾಮ ಯೋಜನೆಯು ಪೂರ್ಣಗೊಂಡ ನಂತರ ಶಾಶ್ವತವಾಗಿ ಪೂರ್ಣಪ್ರಮಾಣದಲ್ಲಿ ಶುದ್ಧ ಕುಡಿಯುವ ನೀರನ್ನು ಕಾರ್ಯಾತ್ಮಕ ನಳ ಸಂಪರ್ಕಗಳ ಮೂಲಕ ಒದಗಿಸಲಾಗುತ್ತದೆ.<br>ರಾಜ್ಯದಲ್ಲಿ ಬಹುತೇಕ ಬಹುಗ್ರಾಮ ಕುಡಿಯುವ ನೀರು ಯೋಜನೆಗಳನ್ನು DBOT ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಗುತ್ತಿಗೆಯಡಿ ಯೋಜನೆಗೆ ಅಗತ್ಯವಿರುವ ನಿವೇಶನಗಳ ಅನುಮತಿಯನ್ನು ವಿವಿಧ ಇಲಾಖೆ / ಸಂಸ್ಥೆಯಿಂದ ಪಡೆಯುವುದು ಸಂಬಂಧಪಟ್ಟ ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಆದಾಗ್ಯೂ, ಇಲಾಖೆಯು ಜಿಲ್ಲಾ ಮತ್ತು ರಾಜ್ಯದ ಹಂತದಲ್ಲಿ ಇಲಾಖೆ / ಸಂಸ್ಥೆಗಳೊಂದಿಗೆ ಕಾಲ ಕಾಲಕ್ಕೆ ಉನ್ನತ್ತ ಮಟ್ಟದ ಸಭೆಗಳನ್ನು ನಡೆಸಿ ಶೀಘ್ರ ಅನುಮತಿ ಪಡೆಯಲು ಕ್ರಮಕೈಗೊಳ್ಳಲಾಗುತ್ತಿದೆ. |

ಗ್ರಾಕುನೀ&ನೈಇ/ಮುಇಂ/ತಾಂತ್ರಿಕ/134/2025-26

(ಪ್ರಿಯಾಂಕ್ ಖರ್ಗೆ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

ಅನುಬಂಧ

**ಜಲ ಜೀವನ್ ಮಿಷನ್ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ**

(ರೂ. ಕೋಟಿಗಳಲ್ಲಿ)

| ಕ್ರ.ಸಂ | ವರ್ಷ | ಹಂಚಿಕೆ | | | ಆರಂಭಿಕ ಶಿಲ್ಕು | | | ಬಿಡುಗಡೆ | | | ಒಟ್ಟು (ಆರಂಭಿಕ ಶಿಲ್ಕು+ ಬಿಡುಗಡೆ) | | | ವೆಚ್ಚ | | |
|---|---|---|---|---|---|---|---|---|---|---|---|---|---|---|---|---|
| | | ಕೇಂದ್ರ | ರಾಜ್ಯ | ಒಟ್ಟು | ಕೇಂದ್ರ | ರಾಜ್ಯ | ಒಟ್ಟು | ಕೇಂದ್ರ | ರಾಜ್ಯ | ಒಟ್ಟು | ಕೇಂದ್ರ | ರಾಜ್ಯ | ಒಟ್ಟು | ಕೇಂದ್ರ | ರಾಜ್ಯ | ಒಟ್ಟು |
| 1 | 2019-20 | 546.06 | 353.94 | 900.00 | 26.61 | 170.51 | 197.12 | 546.06 | 333.01 | 879.07 | 572.66 | 503.52 | 1076.18 | 491.35 | 298.64 | 789.9 |
| 2 | 2020-21 | 1189.40 | 566.17 | 1755.58 | 81.31 | 204.89 | 286.20 | 446.36 | 566.17 | 1012.53 | 527.67 | 771.06 | 1298.72 | 349.62 | 431.40 | 781.0 |
| 3 | 2021-22 | 5008.80 | 3345.45 | 8354.24 | 178.05 | 339.66 | 517.71 | 2504.40 | 3345.45 | 5849.84 | 2682.45 | 3685.11 | 6367.56 | 1510.86 | 1520.55 | 3031.4 |
| 4 | 2022-23 | 5451.85 | 4914.49 | 10366.34 | 1171.59 | 2164.55 | 3336.15 | 2725.93 | 4914.49 | 7640.41 | 3897.52 | 7079.04 | 10976.56 | 3102.62 | 3331.73 | 6434.3 |
| 5 | 2023-24 | 12623.37 | 6309.73 | 18933.10 | 794.90 | 3747.31 | 4542.21 | 4966.62 | 6309.73 | 11276.35 | 5761.52 | 10057.04 | 15818.57 | 5761.52 | 6525.09 | 12286.6 |
| 6 | 2024-25 | 3804.41 | 7603.00 | 11407.41 | 0.00 | 3531.96 | 3531.96 | 570.66 | 7602.99 | 8173.65 | 570.66 | 11134.95 | 11705.61 | 570.66 | 10517.15 | 11087.8 |
| 7 | 2025-26 | 5000.00 | 6050.00 | 11050.00 | 0.00 | 617.80 | 617.80 | 0.00 | 4000.00 | 4000.00 | 0.00 | 4617.80 | 4617.80 | 0.00 | 3318.55 | 3318.5 |
| | **ಒಟ್ಟು** | **33623.89** | **29142.79** | **62766.68** | | | | **11760.02** | **27071.84** | **38831.86** | **11786.63** | **27242.35** | **39028.98** | **11786.63** | **25943.10** | **37729.7** |

ಕೇಂದ್ರ ಸರ್ಕಾರದ ಅನುದಾನ ಬಿಡುಗಡೆಯನ್ನು ನಿರೀಕ್ಷಿಸಿ, ರಾಜ್ಯ ಸರ್ಕಾರವು ಒಟ್ಟು ರೂ.15,504.63 ಕೋಟಿಗಳನ್ನು ಮುಂಗಡವಾಗಿ ಬಿಡುಗಡೆ ಮಾಡಿದೆ. ಈ ಮುಂಗಡ ಅನುದಾನವನ್ನು ಮಾರ್ಗಸೂಚಿಯಲ್ಲಿನ ಅನುಪಾತದಂತೆ ಹೊಂದಾಣಿಕೆ ಮಾಡಲು ಕೇಂದ್ರ ಸರ್ಕಾರದ ಒಟ್ಟು ರೂ.7843.79 ಕೋಟಿಗಳ ಅನುದಾನದ ಅವಶ್ಯಕತೆ ಇರುತ್ತದೆ.

ಮುಖ್ಯ ಲೆಕ್ಕಾಧಿಕಾರಿಗಳು,

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ